
# ಸ್ವಾಮಿ ಧೀರೇಶಾನಂದ (೧೯೦೭-೧೯೯೮)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ** ಭಾಗ ೧ ಅನುವಾದ: **ಕುಮಾರಿ ಪಿ. ಉಷಾ**

೧೯೭೦ರ ಫೆಬ್ರವರಿ ತಿಂಗಳಿನಲ್ಲಿ ಲಕ್ನೌನ ವಿವೇಕಾನಂದ ಪಾಲಿಕ್ಲಿನಿಕ್‌ನ ಉದ್ಘಾಟನೆಯಾಯಿತು. ನಾವು ೧೫೨ ಸಾಧುಗಳು ಅಲ್ಲಿ ಸೇರಿದ್ದೆವು. ಅಲ್ಲಿಂದ ಕಲ್ಕತ್ತೆಗೆ ಹಿಂದಿರುಗುವಾಗ ಕೆಲವು ದಿನಗಳು ನಾನು ಕಾಶಿಯಲ್ಲಿದ್ದೆ. ಒಂದು ದಿನ ಬೆಳಗ್ಗೆ ಮಂದಿರದ ಸೇವಾಶ್ರಮಕ್ಕೆ ಹೋಗುವ ದಾರಿಯಲ್ಲಿ ಒಬ್ಬ ಗಡ್ಡಧಾರಿ ಸಾಧುಗಳಿಗೆ ಪ್ರಣಾಮ ಮಾಡಿದೆ. ಹಿಂದೆಂದೂ ಅವರನ್ನು ಭೇಟಿಯಾಗಿರಲಿಲ್ಲ; ಅವರ ಹೆಸರನ್ನು ಮಾತ್ರ ಕೇಳಿದ್ದೆ. ಅವರು ನನ್ನನ್ನು ಕೇಳಿದರು, ''ನಿನ್ನ ಹೆಸರೇನು?'' ''ಚೇತನಾನಂದ.'' ''ನೀನು ಚೆನ್ನಾಗಿ ಬರೆಯುತ್ತಿ. ನಿನಗೆ sanskrit background ಇತ್ತೆ?'' ಬಹುಶಃ ಅವರು 'ಉದ್ಬೋಧನ' ಪತ್ರಿಕೆಯಲ್ಲಿ ಪ್ರಕಟಿತವಾದ ನನ್ನ ಲೇಖನ 'ರಾಮಚರಿತೇ ಕಾಲಿದಾಸ ಒ ಭವಭೂತಿ' (ರಾಮಚರಿತ್ರೆಯಲ್ಲಿ ಕಾಳಿದಾಸ ಹಾಗೂ ಭವಭೂತಿ) ಯನ್ನು ಓದಿರಬೇಕು. ''ನೀನು ನನ್ನನ್ನು ಭೇಟಿಯಾಗು'' ಎಂದು ಹೇಳಿ ಅವರು ಹೊರಟುಹೋದರು.

ಅಂಬಿಕಾಧಾಮದ ಹಿಂದಿರುವ ಒಂದು ಚಿಕ್ಕ ಕೋಣೆಯಲ್ಲಿ ಅವರು ವಾಸಿಸುತ್ತಿದ್ದರು. ಅವರೊಂದಿಗೆ ಬಹಳಷ್ಟು ವೇದಾಂತ ಚರ್ಚೆ ನಡೆಯುತ್ತಿತ್ತು. ಅವರು ಶಾಸ್ತ್ರಾಧ್ಯಯನದಲ್ಲಿ ಮುಳುಗಿರುತ್ತಿದ್ದರು. ಜೀವನದಲ್ಲಿ ವೇದಾಂತದ ಸತ್ಯದ ಅನುಭವವನ್ನು ಪಡೆಯುವುದರ ಬಗ್ಗೆ ಅವರು ಹೇಳುತ್ತಿದ್ದರು. ನಾನು ಬೇಲೂರು ಮಠದ ತರಬೇತಿ ಕೇಂದ್ರದಲ್ಲಿದ್ದಾಗ ಬ್ರಹ್ಮಚಾರಿ ಸುಜಿತ್ ಹಾಗೂ ಮದನ್ ಕಂಖಲ್‌ನಿಂದ ಬಂದಿದ್ದರು. ಅವರು ಧೀರೇಶಾನಂದ ರಿಂದ ಶಾಸ್ತ್ರಗಳನ್ನು ಕಲಿತಿದ್ದರು. ''ನೀವು ದಿನಾ ೪ ಶ್ಲೋಕಗಳನ್ನು ಬಾಯಿಪಾಠ ಮಾಡಿಕೊಂಡು ಬನ್ನಿ. ನಾನು ಅವುಗಳ ವ್ಯಾಖ್ಯಾನವನ್ನು ಮಾಡುತ್ತೇನೆ. ಇಲ್ಲವಾದರೆ, ನಾನು ಮಾತ್ರ ಕಷ್ಟಪಡುವುದು, ನೀವು ಸುಮ್ಮನಿರುವುದು – ಹೀಗಾಗದು'' ಎಂದು ಅವರು ನಿರ್ದೇಶಿಸಿದ್ದರು.

ಸ್ವಾಮಿ ಶಾರದಾನಂದರಿಂದ ದೀಕ್ಷೆಯನ್ನು ಪಡೆದಿದ್ದ ಸ್ವಾಮಿ ಧೀರೇಶಾನಂದರು ೧೯೩೨ರಲ್ಲಿ ಸಂನ್ಯಾಸವನ್ನು ಪಡೆದಿದ್ದರು. ಸಾಧು ಜೀವನದಲ್ಲಿ ಅವರು ತಪಸ್ಸು, ಸಾಧನೆ, ಅಧ್ಯಯನ, ಅಧ್ಯಾಪನೆಯಲ್ಲದೆ ಕೆಲವು ಉಪಯುಕ್ತ ಶಾಸ್ತ್ರಗ್ರಂಥಗಳನ್ನು ರಚಿಸಿದ್ದರು. ೧೯೭೦ ರಿಂದ ೧೯೮ರ ವರೆಗೆ ನಾನು ಅವರೊಡನೆ ಆತ್ಮೀಯ ಸಂಪರ್ಕವನ್ನಿರಿಸಿಕೊಂಡಿದ್ದೆ. ನಾನು ಭಾರತಕ್ಕೆ ಬಂದಾಗಲೆಲ್ಲ ಕೆಲವು ದಿನಗಳು ಅವರೊಡನೆ ಕಳೆಯುತ್ತಿದ್ದೆ, ಅದಲ್ಲದೆ ಅವರೊಡನೆ ಪತ್ರವ್ಯವಹಾರವನ್ನೂ ಇಟ್ಟುಕೊಂಡಿದ್ದೆ.



ಸಾಧು ಜೀವನದ ಪ್ರಥಮ ಹತ್ತು ವರ್ಷಗಳು ನಾನು ಕಲ್ಕತ್ತದ ಅದ್ವೈತ ಆಶ್ರಮದಲ್ಲಿ ಕಾರ್ಯಕರ್ತನಾಗಿದ್ದೆ. ಹಿಮಾಲಯಕ್ಕೆ ಹೋಗಿ ನಿರಾಲಂಬನೆಯಿಂದ ತಪಸ್ಸು ಮಾಡುವ ಇಚ್ಛೆ ಮನದಲ್ಲಿ ಮೂಡುತಿತ್ತು. ಆದರೆ ಅದಕ್ಕೆ ಅವಕಾಶ ದೊರೆಯಲಿಲ್ಲ. ಠಾಕೂರರ ಸಂನ್ಯಾಸಿ ಶಿಷ್ಯರ ತ್ಯಾಗ, ತಪಸ್ಸು, ಕಠೋರ ಜೀವನಗಳು ನನಗೆ ಪ್ರೇರಣೆ ನೀಡುತ್ತಿದ್ದವು. ನಾನು ಸ್ವಾಮಿ ಧೀರೇಶಾನಂದರಿಗೆ ವಿಶೇಷವಾಗಿ ಋಣಿ. ಏಕೆಂದರೆ ಅವರು ನನ್ನ ಅತೃಪ್ತ ಮನೋವಾಂಛನೆಯನ್ನು ಸ್ವಲ್ಪ ಮಟ್ಟಿಗೆ ಈಡೇರಿಸಿದ್ದರು. ಅವರು ತಮ್ಮ ಡೈರಿಗಳನ್ನೆಲ್ಲ ನನಗೆ ಕೊಟ್ಟರು. ವಾಸ್ತವವಾಗಿ, ವೇದಾಂತದಲ್ಲಿ ನಿಷ್ಣಾತ ಸಾಧುಗಳಾಗಿದ್ದ ಅವರು ದುಂಬಿಯಂತೆ ನಮ್ಮ ಮಠ ಹಾಗೂ ಇತರ ಸಂಪ್ರದಾಯಗಳಿಗೆ ಸೇರಿದ ಸಾಧುಗಳಿಂದ ಜೀವನದುದ್ದಕ್ಕೂ ಅಧ್ಯಾತ್ಮ ಮಧುವನ್ನು ಸಂಗ್ರಹಿಸಿ, ಅದನ್ನು ಅವರು ಸುಂದರವಾಗಿ ಡೈರಿಗಳಲ್ಲಿ ಬರೆದು ಅದಕ್ಕೆ 'ಸತ್ಸಂಗ ರತ್ನಾವಳಿ' ಎಂಬ ಹೆಸರನ್ನು ನೀಡಿದ್ದರು. ಸಾಧುಗಳೊಬ್ಬರು ತಮ್ಮ ಜೀವನವೆಲ್ಲ ಕಷ್ಟಪಟ್ಟು ಸಂಗ್ರಹಿಸಿದ ಸೊತ್ತನ್ನು ನಾನು ಸುಲಭವಾಗಿ ಪಡೆದೆನು. ಹಿರಿಯ ಸಾಧುಗಳಿಗೆ ಸಂಬಂಧಿ

ಸಿದ ಕೆಲವು ವಿಷಯಗಳನ್ನು ಅವರ ಈ ಡೈರಿಯಿಂದ ಆಯ್ದು 'ಉದ್ಬೋಧನ' ಪತ್ರಿಕೆಯಲ್ಲಿ ಪ್ರಕಟಿಸಲಾಗಿತ್ತು. ಮಹಾರಾಜರ ಡೈರಿಯಿಂದ ಸಂಗ್ರಹಿಸಿದ ಮಾಹಿತಿಗಳಿಂದ 'From the Dairy of a Monk' ಎಂಬ ಹೆಸರಿನಿಂದ ೩೦ ಉಪನ್ಯಾಸ ಗಳನ್ನು ನೀಡಿರುವೆ. ಈ ಡೈರಿಗಳು ಅಧ್ಯಾತ್ಮ ಪಿಪಾಸುಗಳಿಗೆ ಅಮೂಲ್ಯ ಸಂಪತ್ತೆನಿಸಿವೆ.

ಸ್ವಾಮಿ ಧೀರೇಶಾನಂದರು ವಿವಿಧ ಪ್ರಕಾರದ ಡೈರಿಗಳನ್ನು ಬರೆದಿದ್ದರು. ಹಿಮಾಲಯದ ಸಾಧುಗಳ ಬಗ್ಗೆ ಬರೆದಿರುವ ಡೈರಿಯ ಎರಡು ಖಂಡಗಳ ಹೆಸರು 'ಸತ್ಸಂಗ ರತ್ನಾವಳಿ'. ಅವರ ಖಾಸಗಿ ದಿನಚರಿ ಪುಸ್ತಕದಲ್ಲಿ ರಾಮಕೃಷ್ಣ ಸಂಘದ ಸಾಧುಗಳ ಬಗ್ಗೆ ಬರೆದಿದ್ದರು. ಇವಲ್ಲದೆ ಅವರ ಬಳಿ ಇನ್ನೂ ಅನೇಕ ಡೈರಿ ಗಳಿದ್ದವು.

ಈ ಖಾಸಗಿ ಡೈರಿ ಅಥವಾ ಚಿಕ್ಕ ನೋಟ್‌ಪುಸ್ತಕದ ಬಗ್ಗೆ ೨೪.೧೨.೧೯೮೨ರಂದು ಅವರೇ ಸ್ವತಃ ನನಗೆ ಬರೆದಿದ್ದರು:

''ಒಂದು ಚಿಕ್ಕ ನೋಟ್ ಪುಸ್ತಕದಲ್ಲಿ ೪೦-೫೦ ವರ್ಷಗಳಿಂದ ಅನೇಕ ವಿಷಯಗಳನ್ನು ಸಣ್ಣ ಅಕ್ಷರಗಳಲ್ಲಿ ಬರೆದಿರುವೆ. ಈಗ ತೆರೆದು ನೋಡುತ್ತೇನೆ, ಹಿಂದಿನ ಅನೇಕ ಪುಟಗಳಲ್ಲಿ ಶಾಯಿ ಮಾಸಿ ಹೋಗಿದೆ. ಅದನ್ನು ಪ್ರತಿ ಮಾಡಲು ನನ್ನಿಂದಲೇ ಸಾಧ್ಯ ವಿಲ್ಲ. ಇತರರೊಂದಿಗೆ ಹಂಚಿಕೊಳ್ಳಲಾಗದಂಥ ವಿಷಯಗಳೂ ಅದರಲ್ಲಿವೆ. ಅವುಗಳನ್ನು ವಿಂಗಡಿಸಬೇಕು. ಆದ್ದರಿಂದಲೇ ಈ 'ಯಕ್ಷನ ಧನ'ವನ್ನು ನಿನಗೇ ಕೊಟ್ಟುಬಿಡೋಣ, ಎಂದುಕೊಂಡೆ. ಡೈರಿಯನ್ನು ಕಳುಹಿಸುವುದು ಹೇಗೆ? ಅದ್ವೈತ ಆಶ್ರಮದ ಪುಸ್ತಕಗಳೊಂದಿಗೆ ಕಳುಹಿಸಲೆ? ಇವೆಲ್ಲ ನನಗೆ ಗೊತ್ತಿಲ್ಲ. ಬೇಗನೆ ಆ ದೇಶದಿಂದ ಭಾರತಕ್ಕೆ ಬರುವವರು ಯಾರಾದರೂ ಇದ್ದಾರೆಯೆ? ಹಾಗಿದ್ದರೆ ಅವರ ಮೂಲಕ ಕಳುಹಿಸಬಹುದು. ಮಹಾರಾಜರುಗಳ ಬಗ್ಗೆ ಪ್ರಾಚೀನ ಸಾಧುಗಳಿಂದ ಕೇಳಿದ್ದ ಅನೇಕ ಹೊಸ ವಿಷಯಗಳನ್ನು ನೀನು ಅವುಗಳಲ್ಲಿ ಖಂಡಿತವಾಗಿಯೂ ಪಡೆಯುವೆ. ಇಷ್ಟು ದಿನ ಈ ನೋಟ್‌ಪುಸ್ತಕವನ್ನು ನಾನು ಯಾರಿಗೂ ಕೊಡಲಿಲ್ಲ. ನಾನೇನಾದಾರೂ ಇದ್ದಕ್ಕಿದ್ದಂತೆ ಸತ್ತು ಹೋದರೆ ಅವುಗಳನ್ನು ಕಸದ ಬುಟ್ಟಿಗೆ ಎಸೆಯುತ್ತಾರೆ.''

೪.೦೨.೧೯೮೩.ರಂದು ಮಹಾರಾಜರು ಬರೆದರು: ''ನೀನು ಹೇಳಿದಂತೆ (ಯಕ್ಷನ ಸಂಪತ್ತು) ನನ್ನ ಚಿಕ್ಕ ನೋಟ್ ಪುಸ್ತಕವನ್ನು ಕಳೆದ ೧.೦೨.೧೯೮೩.ರಂದು ರಿಜಿಸ್ಟರ್ಡ್ ಏರ್‌ಮೇಲ್‌ನಲ್ಲಿ ಕಳುಹಿಸಲಾಗಿದೆ. ತುಂಬಾ ಖರ್ಚಾಯಿತು. ಹೋಗಲಿ! ನಿನಗದು ತಲುಪಿದರೆ ಸಾಕು. ನಾನು ಅದರ ಬಗ್ಗೆ ಚಿಂತಿತನಾಗಿರುವೆನಾದ್ದರಿಂದ ಅದು ತಲುಪಿದೊಡನೆಯೆ ತಲುಪಿದ ವಾರ್ತೆಯನ್ನು ನೀಡು. ಪುಸ್ತಕದಲ್ಲಿ ಅತಿ ಸಣ್ಣ ಅಕ್ಷರಗಳಲ್ಲಿ ನನಗೋಸ್ಕರ ವಾಗಿಯೇ ಬರೆದಿರುವೆನಾದ್ದರಿಂದ ಇತರರಿಗೆ ಓದುವುದು ಕಷ್ಟ ವೆನಿಸಬಹುದು. ಮೊದಲ ಕೆಲವು ಪುಟಗಳನ್ನು ಕಟ್ ಮಾಡಿ ರುವೆ. ಏಕೆಂದರೆ, ಇವುಗಳಲ್ಲಿ ಮಹಾರಾಜರುಗಳಿಗೆ ಸಂಬಂಧಿ ಸಿದ ಯಾವ ವಿಷಯವೂ ಇಲ್ಲ. ಉತ್ತರಾಖಂಡದ ಪ್ರಾಚೀನ ಸಾಧುಗಳ ಬಗ್ಗೆ ಸುಮಾರು ಐವತ್ತು ವರ್ಷಗಳ ಹಿಂದೆ ಬರೆದಿರು ವುದು. ಪುಸ್ತಕದ ಕೊನೆಯ ಭಾಗದಲ್ಲಿ ಪ್ರಭಾಸ ಮಹಾರಾಜರು ಹೇಳಿದ ಮಹಾತ್ಮ ಮಥುರಾದಾಸರ ಬಗ್ಗೆ ಬರೆದಿರುವೆ. ಅವರು ಹರಿದ್ವಾರದ ಒಬ್ಬ ಪ್ರಸಿದ್ಧ ಸಾಧುಗಳಾಗಿದ್ದರು. ಸ್ವಾಮೀಜಿ ಯವರ ತಮ್ಮನಾದ ಮಹೇಂದ್ರನಾಥ ದತ್ತರವರು 'ಸಾಧು ಚತುಷ್ಟಯ'ವೆಂಬ ಪುಸ್ತಕದಲ್ಲಿ ಮಥುರಾದಾಸನ ಬಗ್ಗೆ ಬಹು ಶ್ರದ್ಧೆಯಿಂದ ಬರೆದಿರುವರು. ನನ್ನ ಪುಸ್ತಕದಲ್ಲಿ ಅನೇಕ ಘಟನೆ ಗಳಿದ್ದರೂ ತೊಂದರೆ ನೀಡಬಹುದಾದ ಏನನ್ನೂ ಮುದ್ರಿಸ ಬೇಡ. ಲೇಖನಗಳಿಂದ ನಿನಗೇನಾದರೂ ಪ್ರಯೋಜನವಾಗಿ ದೆಯೋ ಇಲ್ಲವೋ ಎಂಬುದನ್ನು ತಿಳಿಸು.''

ಈ ಅಮೂಲ್ಯ ಖಾಸಗಿ ಡೈರಿಯು ನನ್ನ ಕೈಸೇರಿತು. ಅದನ್ನು ಪ್ರತ್ಯೇಕವಾಗಿ (ಪ್ರಾಚೀನ ಸಾಧುದೇರ್ ಕಥಾ-ದ್ವಿತೀಯ ಭಾಗ) ಮುದ್ರಿಸಲಾಗುವುದು. ೧೯೩೬ರ ರಿಂದ ೧೯೫೬ರ ತನಕ ಮಹಾ ರಾಜರು ಉತ್ತರಕಾಶಿ, ಹೃಷಿಕೇಶ, ಹರಿದ್ವಾರ ಮುಂತಾದ ಸ್ಥಳ ಗಳಲ್ಲಿ ಪ್ರಖ್ಯಾತರಾಗಿದ್ದ ಸಾಧುಗಳ ಸಂಗ ಮಾಡಿ, ಅವರೊಂದಿಗೆ ಮಾಡಿದ ಸಂಭಾಷಣೆಗಳನ್ನು ಈ ದೊಡ್ಡ ಡೈರಿಯಲ್ಲಿ ಉಪ-ಶೀರ್ಷಿಕೆಗಳೊಂದಿಗೆ ಬಲು ಸುಂದರವಾಗಿ ಬರೆದಿದ್ದಾರೆ. ೨೫.೧೦.೧೯೮೫ರಂದು ಮಹಾರಾಜರು ನನಗೆ ಬರೆದರು, ''ನನ್ನ ಬಳಿ ಕೆಲವು ನೋಟ್ ಪುಸ್ತಕಗಳಿವೆ. ಅವುಗಳಲ್ಲಿ ಉತ್ತರಾ ಖಾಂಡದ ವೇದಾಂತಿ ಸಾಧುಗಳ ಬಗ್ಗೆ, ಅನೇಕ ವೇದಾಂತ ವಿಚಾರ ಹಾಗೂ ಕಥೆಗಳು ಇವೆ. ಈ ನನ್ನ ವೃದ್ಧಾವಸ್ಥೆಯಲ್ಲಿ ಅವು ಗಳಿಂದಾಗುವ ಪ್ರಯೋಜನವಾದರೂ ಏನು? ನಿನಗೆ ಅವು ಗಳಿಂದ ಪ್ರಯೋಜನವಾಗಬಹುದು.''

ತಕ್ಷಣವೆ ನಾನು ಹಣ ಕಳುಹಿಸಿ ಅವುಗಳನ್ನು ರಿಜಿಸ್ಟ್ರಿ ಮಾಡಿ ಹಡಗಿನಲ್ಲಿ ಕಳುಹಿಸಲು ಹೇಳಿದೆ. ಅವರು ೧೧-೧೨- ೧೯೮೫ ರಂದು ಕಾಶಿಯಿಂದ ಹೀಗೆ ಬರೆದರು : ''ಮೊನ್ನೆ ಮಣಿಕ ಬಾಬು ಅವರ ಮುಖಾಂತರ (ಅಲ್ಲಿನ ಒಬ್ಬ ಕೆಲಸದವ) ದೂರದಲ್ಲಿರುವ ಅಂಚೆ ಕಚೇರಿ ಮೂಲಕ ಡೈರಿಗಳನ್ನು ನಿನ್ನ ಹೆಸರು ಹಾಗೂ ವಿಳಾಸಕ್ಕೆ ರಿಜಿಸ್ಟರ್ಡ್ ಸೀ ಮೇಲ್‌ನಲ್ಲಿ ಕಳುಹಿಸಲಾಯಿತು. ನಿನಗದು ತಲುಪಿದ ಕೂಡಲೆ ಪತ್ರ ಬರೆದು ತಿಳಿಸು, ಹಾಗೂ ಲೇಖನಗಳು ನಿನಗೆ ಉಪಯುಕ್ತವೋ ಇಲ್ಲವೋ ಎಂಬುದನ್ನು ತಿಳಿಸಿದರೆ ಸಂತೋಷ.''

ಎರಡು ತಿಂಗಳುಗಳ ತರುವಾಯ ಡೈರಿಗಳು ನನ್ನ ಕೈ ಸೇರಿ ದಾಗ ಅವರಿಗೆ ತಿಳಿಸಿದೆ. ಉತ್ತರಾಖಂಡದ ಈ ಮಹಾತ್ಮರು ಗಳೆಲ್ಲರ ಪರಿಚಯವನ್ನು ಕೋರಿದೆ. ಉತ್ತರವಾಗಿ ೧೬.೦೩. ೧೯೮೬.ರಂದು ಕಾಶಿಯಿಂದ ಅವರು ಬರೆದರು. ''ಪಾರ್ಸೆಲ್

ನಿರ್ವಿಘ್ನವಾಗಿ ತಲುಪಿತೆಂದು ತಿಳಿದು ಬಹಳ ನಿಶ್ಚಿಂತನಾದೆ. ಅವುಗಳು ನಿನಗೆ ಇಷ್ಟವಾಗಿ, ನಿನಗೆ ಉಪಯುಕ್ತವಾಗಿದೆ ಯೆಂದು ತಿಳಿದು ಆನಂದವಾಯಿತು. ಬೇಕಾದರೆ ನಿನಗಿಷ್ಟವಾದ ವಿಷಯಗಳನ್ನು ಆಯ್ದು ಒಂದು ಚಿಕ್ಕ ಪುಸ್ತಕವನ್ನು ಮುದ್ರಿಸ ಬಹುದು. ಅದರಲ್ಲಿ ಈ ಮಹಾತ್ಮರ ಹೆಸರುಗಳನ್ನು ಬರೆ, ಆದರೆ ನನ್ನ ಹೆಸರನ್ನು ಬರೆಯಬೇಕಿಲ್ಲ. ನಿನಗೆ ಸರಿಕಂಡಂತೆ ಮಾಡು. ಮಹಾತ್ಮರ ಆಂತರಿಕ ವಿಷಯಗಳು ಹೃದಯಗ್ರಾಹಿಯಾಗಿದ್ದು ಸಕಲರಿಗೂ ಹಿತವನ್ನುಂಟುಮಾಡುತ್ತದೆ.''

ಕಾಶಿಯಲ್ಲಿ ನಾನು ಗುರುದಾಸ ಗುಪ್ತರನ್ನು ನೋಡಿರುವೆ. ಆದರೆ ಎಂದೂ ಅವರೊಂದಿಗೆ ಮಾತನಾಡಿಲ್ಲ. ಅವರು ಸಹ ಕಾಶಿ ಸೇವಾಶ್ರಮದ ೧೧ನೆಯ ನಂಬರದ ವಾರ್ಡಿನಲ್ಲಿರು ತ್ತಿದ್ದರು. ಕಾಶಿಯ ಅದ್ವೈತ ಆಶ್ರಮದ ವರಾಂಡದಲ್ಲಿ ಕುಳಿತು ಪ್ರಾಚೀನ ಸಾಧುಗಳು ತಮ್ಮ ಸ್ಮೃತಿಗಳನ್ನು ಹೇಳುತ್ತಿದ್ದರು. ಗುರುದಾಸ ಗುಪ್ತರು ಮನೆಗೆ ಮರಳಿ ತಾವು ಕೇಳಿದ್ದನ್ನೆಲ್ಲ ಬರೆ ದಿಡುತ್ತಿದ್ದರು. ಠಾಕೂರರ ಸಂನ್ಯಾಸಿ ಶಿಷ್ಯರಿಗೆ ಹಾಗೂ ಗೃಹಸ್ಥ ಭಕ್ತರಿಗೆ ಸಂಬಂಧಿಸಿದಂತೆ ವಿವಿಧ ಪುಸ್ತಕಗಳಿದ್ದವು. ತಾವು ತೀರಿ ಕೊಳ್ಳುವ ಮುನ್ನ ಅವರು ಅವುಗಳನ್ನು ಧೀರೇಶಾನಂದ ಮಹಾ ರಾಜರಿಗೆ ಕೊಟ್ಟಿದ್ದು, ನಂತರ ನಾನು ಕಾಶಿಗೆ ಹೋದಾಗ ಅವು ಗಳನ್ನು ರಘುವರಾನಂದಜಿಯವರಿಂದ ಸಂಗ್ರಹಿಸಿದೆ. ಮಹಾ ರಾಜರು ಗುರುದಾಸ ಗುಪ್ತರ ಬಗ್ಗೆ ತಮ್ಮ ೧೪.೧೧.೧೯೬೧ರ ಪತ್ರದಲ್ಲಿ ನನಗೆ ಹೀಗೆ ಬರೆದಿದ್ದರು: ''ನೇರ ಶಿಷ್ಯರ ವಿಷಯ ವಾಗಿ ಶ್ರೀ ಗುರುದಾಸ ಬಾಬು ಬರೆದ (ಪ್ರಕಟಿತ-ಅಪ್ರಕಟಿತ; ಪ್ರಕಟಣೆಗೆ ಅರ್ಹವಾದ, ಹಾಗೂ ಅರ್ಹವಲ್ಲದ) ಅನೇಕ ಪುಸ್ತಕ ಗಳು ಅವರು ಸ್ವರ್ಗಸ್ಥರಾದ ಬಳಿಕ ನನ್ನ ಬಳಿಯಲ್ಲಿವೆ. ಅವರು ನರಾಯಿಲ್ ಕಾಲೇಜಿನ ಗಣಿತ ಪ್ರೊಫೆಸರ್ ಆಗಿದ್ದರು. ಬಾಲ್ಯ ದಿಂದಲೇ ಬ್ರಹ್ಮಚಾರಿ, ಸ್ವಾಮಿ ಶಾರದಾನಂದರಿಂದ ದೀಕ್ಷೆ ಪಡೆದಿದ್ದ ಪ್ರಿಯ ಶಿಷ್ಯ, ಆಜೀವನ ಸಾಧನ-ಭಜನಶೀಲ, ವಿದ್ವಾಂಸ, ಮಧುರಭಾಷಿಗಳಾಗಿದ್ದ ಗುರುದಾಸ ಬಾಬು ಬಹು ಸದ್ಗುಣಸಂಪನ್ನರಾಗಿದ್ದರು. ತಮ್ಮ ಕೊನೆಯ ಅನೇಕ ವರ್ಷ ಗಳನ್ನು ಕಾಶೀ ಸೇವಾಶ್ರಮದಲ್ಲೆ ಕಳೆದು ವಿಶ್ವನಾಥನ ಶ್ರೀಚರಣ ಗಳಲ್ಲಿ ಲೀನರಾದರು. ''

''They lived with God'', ''God lived with Them'' ಹಾಗೂ 'ಉದ್ಬೋಧನ'ದಿಂದ ಪ್ರಕಟಿತವಾದ ಶ್ರೀ ರಾಮಕೃಷ್ಣರ ನೇರ ಶಿಷ್ಯರ ಸ್ಮೃತಿಮಾಲೆಗಳನ್ನು ಬರೆಯಲು ಈ ಅಮೂಲ್ಯ ಡೈರಿಗಳು ನನಗೆ ಬಹಳ ಸಹಾಯಕವಾದುವು. ನಮ್ಮ ಪೀಳಿಗೆಯವರಾರೂ ಠಾಕೂರರ ನೇರ ಶಿಷ್ಯಂದಿರನ್ನು ನೋಡಿಲ್ಲ. ಆದರೆ ಅವರ ಶಿಷ್ಯ ಹಾಗೂ ಭಕ್ತರ ಪ್ರತ್ಯಕ್ಷ ವಿವರಣೆಗಳು ನಮಗೆ ಅನೇಕ ಮಾಹಿತಿಗಳನ್ನು ನೀಡಿವೆ. ಈ ಸಾಧುಗಳೆಲ್ಲ ಡೈರಿಗಳನ್ನು ಬರೆದಿದ್ದರೆ ನಾವು ಶ್ರೀರಾಮಕೃಷ್ಣ, ಶ್ರೀಮಾತೆ ಹಾಗೂ ಅವರ ಸಂನ್ಯಾಸಿ ಶಿಷ್ಯರುಗಳ ಬಗ್ಗೆ ಅನೇಕ ವಿಷಯಗಳನ್ನು ತಿಳಿಯ ಬಹುದಿತ್ತೆಂದು ತೋರುತ್ತದೆ. 'ಗತಸ್ಯ ಶೋಚನಾ ನಾಸ್ತಿ' ಎಷ್ಟು ವಿಷಯಗಳನ್ನು ಸಂಗ್ರಹಿಸಲಾಗಿರುವುದೋ ಅದರಿಂದಲೆ ನಾವು ತೃಪ್ತರಾಗಬೇಕು.

ಮಹಾರಾಜರು ನನಗೆ ಅನೇಕ ಪತ್ರಗಳನ್ನು ಬರೆದಿದ್ದರು. ಇವುಗಳಲ್ಲಿ ಅನೇಕ ಸಾರಗರ್ಭ ಉಪದೇಶಗಳೂ, ಶಾಸ್ತ್ರವಾಕ್ಯ ಗಳೂ, ಸಾಧನಸಂಕೇತಗಳೂ ಇರುತ್ತಿದ್ದವು. ಕೆಲವು ಪತ್ರಾಂಶ ಗಳನ್ನು ಇಲ್ಲಿ ಉಲ್ಲೇಖಿಸುತ್ತಿರುವೆ:

**೩೦.೦೩.೧೯೬೧, ಕಾಶಿ ಸೇವಾಶ್ರಮ**

ಹಿರಿಯ ಸಾಧುಗಳೊಬ್ಬರಿಂದ ಕೇಳಿದ ಉಪದೇಶದ ಸಾರ ವನ್ನು ನಿನಗೆ ನೀಡುತ್ತಿರುವೆ:

ಜನರು ಹಾವು-ಮುಂಗುಸಿಗಳ ಆಟವನ್ನು ನೋಡುತ್ತಾರೆ. ಮುಂಗುಸಿ ಹಾವನ್ನು ಕಚ್ಚುತ್ತದೆ. ಹಾವು ಕೂಡ ಮುಂಗಸಿಯನ್ನು ಕಚ್ಚುತ್ತದೆ. ಹಾವನ್ನು ಕಚ್ಚಿದರೆ ಮುಂಗುಸಿಯು ತಕ್ಷಣವೆ ಅಲ್ಲಿಂದ ಹೊರಟುಹೋಗಿ ಮತ್ತೆ ಹಿಂದಿರುಗುತ್ತದೆ. ಆಗ ಜನರು, ಮುಂಗುಸಿಯು ಹಾವಿನ ವಿಷವನ್ನು ನಾಶಮಾಡಲು ಕಾಡಿಗೆ ಹೋಗಿ ಬೇಕಾದ ಗಿಡ-ಮೂಲಿಕೆಯನ್ನು ಆಘ್ರಾಣಿಸಿ ಹಿಂದಿರುಗುತ್ತದೆಂದು ಹೇಳುತ್ತಾರೆ. ಮುಂಗುಸಿ ಜ್ಞಾನಿಯಂತೆ ವ್ಯಾವಹಾರಿಕ ಜೀವನದಲ್ಲಿ , ಜ್ಞಾನಿಯನ್ನು ಅಪಮಾನಕ್ಕೀಡು ಮಾಡಿದರೆ, ಅಥವ ಯಾವುದೇ ವಿಕ್ಷೇಪದ ಕಾರಣವು ನಡೆದರೆ, ಆತನು ಆತ್ಮಜ್ಞಾನರೂಪಿ ಗಿಡ-ಮೂಲಿಕೆಯನ್ನು ಆಘ್ರಾಣಿಸಿ ವಿಕ್ಷೇಪದಿಂದ ಜನಿಸಿದ ವಿಷದಿಂದ ಮುಕ್ತನಾಗುತ್ತಾನೆ. ಚಿತ್ತವು ಬಹಿರ್ಮುಖವಾಗಿ ವಿಕ್ಷಿಪ್ತವಾದಾಗ ಜ್ಞಾನಿಯು ಅಂತರ್ಮುಖಿ ಯಾಗಿ ಮುಂಗುಸಿಯಂತೆ ಆತ್ಮಜ್ಞಾನರೂಪಿ ಗಿಡ-ಮೂಲಿಕೆ ಯನ್ನು ಆಶ್ರಯಿಸುವನು. ಅದರ ಪ್ರಭಾವದಿಂದ ವ್ಯವಹಾರ ಜನಿತ ವಿಕ್ಷೇಪದ ಪ್ರಭಾವವು ನಾಶವಾಗುವುದು. ಶರೀರ ಇರುವ ತನಕ ವ್ಯಾವಹಾರಿಕ ಜೀವನವನ್ನು ನಡೆಸಲೇಬೇಕಾಗುತ್ತದೆ. ಕ್ರಿಯೆ-ಪ್ರತಿಕ್ರಿಯೆಗಳು ಅನಿವಾರ್ಯವೆ. ಚಿತ್ತದ ವಿಕ್ಷೇಪವೂ ಅನಿವಾರ್ಯವೆ. ಏಕೆಂದರೆ ವಿಕ್ಷೇಪವೆಂಬುದು ಚಿತ್ತದ ಸ್ವಭಾವ. ಆದರೆ ಆತ್ಮಜ್ಞಾನರೂಪಿ ಔಷಧವಿರುವಾಗ ಚಿಂತೆಯೇಕೆ? ಯಾವ ವಿಷಯವೂ ಅವನಿಗೆ ತೊಂದರೆಯನ್ನುಂಟುಮಾಡ ಲಾಗದು. ನಾನು ಆತ್ಮರೂಪಿ, ದೃಶ್ಯವು ಮಿಥ್ಯೆ-ಒಂದು ಪ್ರತೀತಿ ಮಾತ್ರವಷ್ಟೆ. ಭ್ರಾಂತನಾಗಿರುವಾಗ ಮಾತ್ರವೇ ನಾನು ಹಗ್ಗದಲ್ಲಿ ಸರ್ಪವನ್ನು ಕಾಣುವುದು. ಅರ್ಥಾತ್, ಹಗ್ಗವೇ ಸರ್ಪದಂತೆ ಕಾಣುವುದು. 'ಸರ್ವಭೂತೇಷು ಚಾತ್ಮಾನಂ ಸರ್ವಭೂತಾನಿ ಚಾತ್ಮನಿ' - ಇದೇ ಈ ಶ್ಲೋಕದ ತಾತ್ಪರ್ಯ. ಅರ್ಥಾತ್ ಈ ವಿಶ್ವ ಪ್ರಪಂಚವೆಲ್ಲ ಭಗವಂತನ ಲೀಲೆಯೆ. ಆತನೇ ಸರ್ವಜೀವಿ ಗಳಲ್ಲೂ ನೆಲೆಸಿರುವನು. ಇದೊಂದು ಮಹಾನಾಟಕವೇ ಸರಿ.

*(ಮುಂದುವರಿಯುವುದು)*